DW-1 ಗೋಪಾಲ

Date: 08.01.2026

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ವಾದಿ ಪರ ಶ್ರೀ ಎಂ ವಿ ಆರ್ ವಕೀಲರಿಂದಃ**

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಜನ್ಮ ದಿನಾಂಕ 01.05.1957. ನಾನು ಮೂಲತಃ ಬಳ್ಳಾರಿ ಜಿಲ್ಲೆಯವನು. ನಾನು ಚಳ್ಳಕೆರೆಗೆ ಬಂದು ಸುಮಾರು 45 ವರುಷಗಳಾಗಿವೆ. ನಾನು ವಾಸ್ತವ ಅಂಶಗಳನ್ನು ಮಾರೆಮಾಚಿ ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ದಾವಾ ಸ್ವತ್ತು ಅವರಿಗೆ ಸೇರಿದೆ ಎಂದು ಈ ದಾವೆಯನ್ನು ಹೂಡಿರುತ್ತಾರೆ. ದಾವಾ ಸ್ವತ್ತುಗಳಾದ ಸನಂ.56/1 ಮತ್ತು 56/2 ವಾದಿಗಳ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ಬಂಗಾರಜ್ಜ ಅಲಿಯಾಸ್ ಬಂಗಾರಯ್ಯ ರವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿಯಲ್ಲ. ಅವರ ಹೆಸರು ಬಂಗಾರಜ್ಜಿ ಮತ್ತು ಬೋರಜ್ಜಿ ಎಂದರೆ ಸರಿಯಲ್ಲ. 1 ರಿಂದ 4 ನೇ ಪ್ರತಿವಾದಿರವರು ಬಂಗಾರಜ್ಜಿ ಮಕ್ಕಳು ಎಂದರೆ ಸರಿಯಲ್ಲ. 15 ರಿಂದ 18 ನೇ ಪ್ರತಿವಾದಿಗಳು ಬೋರಜ್ಜಿ ರವರ ಮಕ್ಕಳು ಎಂದರೆ ಸರಿಯಲ್ಲ. ಈ ಬಗ್ಗೆ ವಾದಿಗಳು ವಂಶವೃಕ್ಷವನ್ನು ಹಾಜರುಪಡಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಗಳಿಗೆ ದಾವಾ ಸ್ವತ್ತುಗಳಲ್ಲಿ 3/1 ಭಾಗ ಇದೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತನ್ನು ಎಷ್ಟು ಮೊತ್ತಕ್ಕೆ ಖರೀದಿ ಮಾಡಿದ್ದೇನೆ ಎಂದು ನಾನು ಪ್ರಮಾಣ ಪತ್ರದಲ್ಲಿ ಹೇಳಲಿಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತುಗಳ ಚಕ್ಕುಬಂದಿ ಹೇಳಲಾಗುವುದಿಲ್ಲ, ಆದರೆ ನಾನು ಖರೀದಿ ಮಾಡಿದ ಸನಂ.56/2 ಎ2 ರ ಚಕ್ಕುಬಂದಿ ನನಗೆ ಹೇಳಲಾಗುತ್ತದೆ. ವಾದಿಗಳು ಮತ್ತು 1 ರಿಂದ 22 ಪ್ರತಿವಾದಿಗಳು ಮಾತ್ರ ಸಂಪೂರ್ಣ ಸನಂ.56/2 ರಲ್ಲಿ ಸ್ವಾದೀನವನ್ನು ಹೊಂದಿದ್ದಾರೆ ಎಂದರೆ ಸರಿಯಲ್ಲ. 1 ರಿಂದ 22 ನೇ ಪ್ರತಿವಾದಿಗಳು ನನಗೆ ಯಾವುದೇ ಜಮೀನಿನ ಸ್ವಾದೀನವನ್ನು ಬಿಟ್ಟು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನೇ ಸಾದೀನದಲ್ಲಿ ಇದ್ದೇನೆ ಎನ್ನುವ ಬಗ್ಗೆ ಗ್ರಾಮಲೆಕ್ಕಾದಿಕಾರಿಯವರಿಂದ ಯಾವುದೇ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸುಮಾರು 100 ವರುಷಗಳಿಂದ ವಾದಿಗಳು ಮತ್ತು 1 ರಿಂದ 22 ನೇ ಪ್ರತಿವಾದಿಗಳು ದಾವಾ ಸ್ವತ್ತಿನ ಸ್ವಾಧೀನವನ್ನು ಹೊಂದಿದ್ದಾರೆ ಎಂದರೆ ಸರಿಯಲ್ಲ. ಸಣ್ಣಬೋರಯ್ಯ ಬಿನ್ ಚನ್ನಯ್ಯ ರವರಿಗೆ ದಾವಾ ಸ್ವತ್ತನ್ನು ನನಗೆ ಮಾರಾಟ ಮಾಡುವ ಹಕ್ಕು ವಾ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

ಚನ್ನಯ್ಯ ರವರು ಯಾವಾಗ ಮರಣ ಹೊಂದಿದರು ಎಂದು ನನಗೆ ಗೊತ್ತಿಲ್ಲ. ನಾನು ಖರೀದಿ ಮಾಡಿದ ಜಮೀನಿನಲ್ಲಿ ವಾದಿಯರಿಗೂ ಹಕ್ಕು ಇದೆ ಎಂದರೆ ಸರಿಯಲ್ಲ. ಸಣ್ಣಬೋರಯ್ಯ ರವರು ಸದರಿ ಆಸ್ತಿ ಅವರ ಸ್ವಯಾರ್ಜಿತ ಆಸ್ತಿ ಎಂದು ಹೇಳಿದ ಮೇರೆಗೆ ನಾನು ಜಮೀನನ್ನು ಖರೀದಿ ಮಾಡಿದ್ದೆನು. ನಾನು ಕಾನೂನು ಬಾಹಿರವಾಗಿ ಸಣ್ಣಬೋರಯ್ಯ ರವರಿಂದ ಜಮೀನು ಖರೀದಿ ಮಾಡಿ ವಾದಿಯರಿಗೆ ಮೋಸ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿದ ಜಮೀನಿನಲ್ಲಿ ಸ್ವಾಧೀನವನ್ನು ಹೊಂದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿದ ಪತ್ರ ವಾದಿಯರಿಗೆ ಬಂಧನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ. ಸಣ್ಣ ಬೋರಯ್ಯ ರವರು ಅಕ್ರಮವಾಗಿ ಖಾತೆ ಬದಲಾವಣೆಯನ್ನು ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ಖರೀದಿಸಿದ ಜಮೀನಿನ ಅಭಿವೃದ್ಧಿಗಾಗಿ ಎಷ್ಟು ಹಣ ಖರ್ಚು ಮಾಡಿದ್ದೇನೆ ಅಂತ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮಾದಿಸಿಲ್ಲ. ಯಾವ ರೀತಿ ನಾನು ಜಮೀನಿನ ಅಭಿವೃದ್ಧಿಗೊಳಿಸಿದ್ದೇನೆ ಎಂದು ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ. ವಾದಿಗಳು ಮತ್ತು 1 ರಿಂದ 22 ನೇ ಪ್ರತಿವಾದಿಗಳು ಷರಿಕ್ಕಾಗಿ ಸುಳ್ಳು ದಾವೆಯನ್ನು ಸಲ್ಲಿಸಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆ ಹೂಡಲು ವಾದಿಯರಿಗೆ ಕಾಲಪರಿಮಿತಿ ಇರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸೃಷ್ಟಿ ಮಾಡಿದ ದಾಖಲಾತಿಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ